# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 2330

ಸದಸ್ಯರ ಹೆಸರು : ಶ್ರೀ ಐವನ್ ಡಿ'ಸೋಜಾ
(ವಿಧಾನಸಭೆಯಿಂದ ಚುನಾಯಿತರಾದವರು)

ಉತ್ತರಿಸುವ ದಿನಾಂಕ : 27.03.2026

ಉತ್ತರಿಸುವ ಸಚಿವರು : ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ
ಕನ್ನಡ ಮತ್ತು ಸಂಸ್ಕೃತಿ ಸಚಿವರು

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಕರಾವಳಿ ಭಾಗದಲ್ಲಿ ಕೊಂಕಣಿ ಭಾಷಾ ಅಭಿವೃದ್ಧಿಗೆ ಸರ್ಕಾರ ಯಾವ ಯಾವ ಕ್ರಮ ಕೈಗೊಂಡಿದೆ; ಕೊಂಕಣಿ ಭಾಷೆಯ ಅಭಿವೃದ್ಧಿಗೆ ಇರುವ ಅಕಾಡೆಮಿ ಕಟ್ಟಡವು ಇನ್ನೂ ಪೂರ್ತಿಯಾಗದೇ ಇರಲು ಕಾರಣವೇನು; (ವಿವರ ನೀಡುವುದು) | ಕರಾವಳಿಯಲ್ಲಿ ಕೊಂಕಣಿ ಭಾಷಾ ಅಭಿವೃದ್ಧಿಗೆ ಕರ್ನಾಟಕ ಕೊಂಕಣಿ ಸಾಹಿತ್ಯ ಅಕಾಡೆಮಿಯನ್ನು ಸ್ಥಾಪಿಸಿ, ಕೊಂಕಣಿ ಭಾಷೆ, ಕಲೆ, ಸಾಹಿತ್ಯಕ್ಕೆ ಪ್ರೋತ್ಸಾಹವನ್ನು ನೀಡುತ್ತಿದೆ. ಈ ಸಂಬಂಧವಾಗಿ ಇಲಾಖೆಯಿಂದ ಪ್ರತಿ ವರ್ಷ ಅನುದಾನವನ್ನು ನೀಡಲಾಗುತ್ತಿದೆ.<br><br>ಸರ್ಕಾರದ ಆದೇಶ ಸಂಖ್ಯೆ: ಕಸಂವಾ 47 ಕೆ.ಒ.ಎಲ್ ಆಕ 2021, ದಿನಾಂಕ:02.12.2021ರಲ್ಲಿ ಕರ್ನಾಟಕ ಕೊಂಕಣಿ ಸಾಹಿತ್ಯ ಅಕಾಡೆಮಿಯ ಕೊಂಕಣಿ ಭವನದ ನಿರ್ಮಾಣಕ್ಕೆ ರೂ.300.00 ಲಕ್ಷಗಳ ಅಂದಾಜು ಪಟ್ಟಿಗೆ ಸೀಮಿತಗೊಳಿಸಿ, ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರದಿಂದ ಜಿಲ್ಲಾಧಿಕಾರಿ, ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು ಇವರಿಗೆ ಬಿಡುಗಡೆ ಮಾಡಲು ಆಡಳಿತಾತ್ಮಕ ಮಂಜೂರಾತಿ ನೀಡಿ ಆದೇಶಿಸಲಾಗಿರುತ್ತದೆ.<br><br>ಸದರಿ ಪೂರ್ಣ ಅನುದಾನವನ್ನು ಜಿಲ್ಲಾಧಿಕಾರಿ ದಕ್ಷಿಣ ಜಿಲ್ಲೆ ರವರಿಗೆ ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರದ ಆದೇಶ ಸಂಖ್ಯೆ: ಕಗಪಅಪ್ರಾ/59/ಅ/2019-20, ದಿನಾಂಕ: 09.01.2020ರಲ್ಲಿ ಬಿಡುಗಡೆ ಮಾಡಲಾಗಿದ್ದು, ಹಾಗೂ ಪತ್ರ ಸಂಖ್ಯೆ: ಕಗಪಅಪ್ರಾ/62/ಅ/2019-20, ದಿನಾಂಕ: 22.05.2025ರಲ್ಲಿ ಬಿಡುಗಡೆಯಾದ ಅನುದಾನದ ಮಿತಿಯಲ್ಲಿಯೇ ಎಲ್ಲಾ ಕಾಮಗಾರಿಗಳನ್ನು ಪೂರ್ಣಗೊಳಿಸಲು ಷರತ್ತು ವಿಧಿಸಲಾಗಿದೆ<br><br>ಸದರಿ ಕಾಮಗಾರಿಯ ಅನುಷ್ಠಾನ ಏಜೆನ್ಸಿಯು ಲೋಕೋಪಯೋಗಿ ಇಲಾಖೆಯಾಗಿರುತ್ತದೆ. ಈಗಾಗಲೇ ರೂ.269.54 ಲಕ್ಷಗಳನ್ನು ವೆಚ್ಚ ಮಾಡಿ, ಬಿಡುಗಡೆಯಾಗಿರುವ ರೂ.30.40 ಲಕ್ಷಗಳು ಅನುಷ್ಠಾನ ಏಜೆನ್ಸಿಯಲ್ಲಿ ಬಾಕಿ ಇರುತ್ತದೆ. ಸ್ಥಳೀಯ ಜಿಲ್ಲಾಡಳಿತವು ಕಾಮಗಾರಿ ಪೂರ್ಣಗೊಳಿಸಲು ಅಗತ್ಯ |

| | | |
|---|---|---|
| | | ಕ್ರಮವಹಿಸಬೇಕಾಗಿರುತ್ತದೆ. ಈ ಬಗ್ಗೆ ಗಡಿ ಅಭಿವೃದ್ಧಿ ಪ್ರಾಧಿಕಾರ ರವರು ಸ್ಥಳಕ್ಕೆ ಭೇಟಿ ನೀಡಿ ಅನುಷ್ಠಾನ ಏಜೆನ್ಸಿಯು ಅಗತ್ಯ ತುರ್ತು ಕ್ರಮವಹಿಸಲು ದಿನಾಂಕ: 02.05.2025 ರಂದು ಸೂಚನೆ ನೀಡಲಾಗಿರುತ್ತದೆ. ಸದರಿ ಕಟ್ಟಡ ಪ್ರಗತಿ ಕುರಿತು ದಿನಾಂಕ:25.09.2025ರಂದು ಮಾನ್ಯ ಸಭಾಧ್ಯಕ್ಷರು, ಕರ್ನಾಟಕ ವಿಧಾನ ಸಭೆ ಇವರು ಜಿಲ್ಲಾಧಿಕಾರಿಗಳ ಕಛೇರಿ, ದಕ್ಷಿಣ ಕನ್ನಡ ಜಿಲ್ಲೆ, ಇಲ್ಲಿ ಸಭೆ ನಡೆಸಿ ಅಗತ್ಯ ಸೂಚನೆ ನೀಡಿರುತ್ತಾರೆ. |
| (ಆ) | ಕೊಂಕಣಿ ಭಾಷಾ ಎಂ.ಎ ಪದವಿ ಶಿಕ್ಷಣ ಪಡೆಯಲು ಮಂಗಳೂರು ವಿಶ್ವವಿದ್ಯಾಲಯದಲ್ಲಿ ಅವಕಾಶ ನೀಡಲಾಗಿದ್ದು, ಆ ಮೂಲಕ ಅನೇಕ ಉದ್ಯೋಗ ಗಳಿಸಿ, ಪ್ರಸುತ ಎಂ.ಎ ಇನ್ ಕೊಂಕಣಿ ಅಧ್ಯಯನವನ್ನು ವಿಶ್ವವಿದ್ಯಾನಿಲಯ ರದ್ದು ಪಡಿಸಿದ ಬಗ್ಗೆ ಸರ್ಕಾರದ ಕೈಗೊಂಡ ಕ್ರಮವೇನು; (ವಿವರ ನೀಡುವುದು) | ಕೊಂಕಣಿ ಭಾಷಾ ಎಂ.ಎ ಪದವಿ ಶಿಕ್ಷಣ ಪಡೆಯಲು ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ವಿದ್ಯಾರ್ಥಿಗಳ ಪ್ರವೇಶಾತಿ ಇಲ್ಲದಿರುವುದರಿಂದ ಸ್ಥಗಿತಗೊಳಿಸಲಾಗಿದೆಯೇ ಹೊರತು ರದ್ದುಪಡಿಸಿರುವುದಿಲ್ಲ. |
| ಇ) | ಮಂಗಳೂರು ವಿಶ್ವವಿದ್ಯಾಲಯ ಮಟ್ಟದಲ್ಲಿ ಕೊಂಕಣಿ ಚೇರ್ ಇನ್ ಕ್ರಿಶ್ಚಿಯಾನಿಟಿ (Konkani Chair In Christyanity) ಸ್ಥಾಪನೆಯಾಗಿದ್ದು, ಈ ಮೂಲಕ 2024-25 ಮತ್ತು 2025-26 ರಲ್ಲಿ ಕೈಗೊಂಡ ಕಾರ್ಯಕ್ರಮಗಳೇನು; ಪ್ರಸ್ತುತ ಇರುವ ಅನುದಾನ ಎಷ್ಟು; (ವಿವರ ನೀಡುವುದು) | ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ಕೊಂಕಣಿ ಅಧ್ಯಯನ ಪೀಠದಲ್ಲಿ ಪ್ರಸ್ತುತ ರೂ.2,57,50,000/- ಗಳ ಅನುದಾನ ಇರುತ್ತದೆ.<br><br>2024-25 ಮತ್ತು 2025-26ರಲ್ಲಿ ಕೈಗೊಂಡ ಕಾರ್ಯಕ್ರಮಗಳ ವಿವರ ಈ ಕೆಳಗಿನಂತಿವೆ:<br><br>• ಕೊಂಕಣಿ ಭಾಷೆ, ಸಾಹಿತ್ಯ, ಜನಪದ ಪರಂಪರೆ ಕುರಿತು ರಾಷ್ಟ್ರಮಟ್ಟದ ಕಾರ್ಯಾಗಾರ / ವಿಚಾರ ಸಂಕಿರಣವನ್ನು ಕರ್ನಾಟಕ, ಗೋವಾ, ಮಹಾರಾಷ್ಟ್ರ, ಕೇರಳದಾದ್ಯಂತ ಸಂಘಟಿಸಲಾಗಿದೆ.<br><br>• ಕೊಂಕಣಿ ಅಧ್ಯಯನ ಪೀಠ ಹಾಗೂ ವಿಶ್ವ ಕೊಂಕಣಿ ಕೇಂದ್ರ ಮಂಗಳೂರು ಇದರ ಸಹಯೋಗದಲ್ಲಿ "ಕರ್ನಾಟಕದಲ್ಲಿ ಕೊಂಕಣಿ ಭಾಷಿಕರ ವಲಸೆ ಹಾಗೂ ವಸಾಹತು ಮಾದರಿ" ಎಂಬ ವಿಷಯದಲ್ಲಿ ಸಂಶೋಧನೆಯನ್ನು ಕೈಗೊಳ್ಳಲಾಗಿದೆ. ಈ ಸಂಶೋಧನೆಯನ್ನು ಕೈಗೊಳ್ಳಲು 2 ಸಂಶೋಧಕರಿಗೆ ಪೂರ್ಣಕಾಲಿಕ ನೆಲೆಯಲ್ಲಿ ನಾಲ್ಕು ವರ್ಷದ ಅವಧಿಗೆ ಶಿಷ್ಯವೇತನವನ್ನು ನೀಡಲಾಗಿದೆ.<br><br>• ಪ್ರಸ್ತುತ ಆರು ಮಂದಿ ಅಭ್ಯರ್ಥಿಗಳಿಗೆ ಕಿರು ಸಂಶೋಧನಾ ಶಿಷ್ಯವೇತನವನ್ನು ನೀಡಲಾಗಿದೆ.<br><br>• ಕೊಂಕಣಿ ಸಾಹಿತ್ಯ, ಸಂಸ್ಕೃತಿ ಹಾಗೂ ಪರಂಪರೆಗೆ ಸಂಬಂಧಿಸಿದ ವಿಷಯದಲ್ಲಿ ಸಂಶೋಧನೆ ಕೈಗೆತ್ತಿಕೊಳ್ಳಲಾಗಿದೆ. |

- ಒಂದು ಪೂರ್ಣಾವಧಿ ಶಿಷ್ಯವೇತನವನ್ನು ಒಂದು ವರ್ಷದ ಅವಧಿಗೆ ನೀಡಿ ಕೊಂಕಣಿ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ವಿಜೇತರ ಕೃತಿಯ ವಿಮರ್ಶೆಯ ಕಾರ್ಯ ಕೈಗೆತ್ತಿಕೊಳ್ಳಲಾಗಿದೆ.

- ಕೊಂಕಣಿ ಅಧ್ಯಯನವನ್ನು ಪ್ರೋತ್ಸಾಹಿಸುವುದಕ್ಕೋಸ್ಕರ ಪದವಿ ತರಗತಿಗಳಲ್ಲಿ ಕೊಂಕಣಿಯನ್ನು ದ್ವಿತೀಯ ಭಾಷೆಯಾಗಿ ಅಧ್ಯಯನ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಉಚಿತ ಪಠ್ಯಪುಸ್ತಕವನ್ನು ಕೊಂಕಣಿ ಅಧ್ಯಯನ ಪೀಠ ಒದಗಿಸುತ್ತಿದೆ.

- ಕೊಂಕಣಿ ಸ್ನಾತಕೋತ್ತರ ಶಿಕ್ಷಣಕ್ಕೆ ಪ್ರೋತ್ಸಾಹವನ್ನು ನಿರಂತರವಾಗಿ ಅಧ್ಯಯನ ಪೀಠ ನೀಡುತ್ತಿದೆ. ವಿದ್ಯಾರ್ಥಿಗಳಿಗೆ ಆಕರ ಗ್ರಂಥ ಖರೀದಿ, ವಿಶೇಷ ಉಪನ್ಯಾಸ, ಕಾರ್ಯಾಗಾರ ಮುಂತಾದ ಚಟುವಟಿಕೆಗಳನ್ನು ಸಂಘಟಿಸಲಾಗುತ್ತಿದೆ.

- ಅಧ್ಯಯನ ಪೀಠವು ಕೊಂಕಣಿ ಜನಪದ ಕೋಶ ರಚನೆಯನ್ನು ಪೂರ್ಣಗೊಳಿಸಿ ಪ್ರಕಟಿಸಿದೆ.

- ಕೊಂಕಣಿ ತೆಸೋರಸ್ ರಚನೆ ಕಾರ್ಯ ಭರದಿಂದ ಸಾಗುತ್ತಿದೆ. ಅದರ ರಚನೆಗೆ ಕ್ಷೇತ್ರಕಾರ್ಯ ಮಾಡಲು ವಿವಿಧ ಪ್ರದೇಶಗಳಿಗೆ ಭೇಟಿ ನೀಡದೆ ತಂತ್ರಜ್ಞಾನದ ಬೆಂಬಲದೊಂದಿಗೆ ಮಾಹಿತಿ ಸಂಗ್ರಹಿಸುವ ಕಾರ್ಯ ಭರದಿಂದ ಸಾಗುತ್ತಿದೆ.

- ಕೊಂಕಣಿ ಅಸ್ಮಿತೆಯನ್ನು ಎತ್ತಿಹಿಡಿಯುವುದಕ್ಕೋಸ್ಕರ ಪ್ರತಿ ವರ್ಷ ಆಗಸ್ಟ್ 20ನೇ ದಿನಾಂಕದಂದು ಕೊಂಕಣಿ ಭಾಷೆ ಸಂವಿಧಾನದ 8ನೇ ಪರಿಚ್ಛೇದಕ್ಕೆ ಸೇರ್ಪಡೆಯಾದ ನೆನಪಿಗೋಸ್ಕರ "ಕೊಂಕಣಿ ಮಾನ್ಯತಾ ದಿನಾಚರಣೆ'ಯನ್ನು ಸಂಘಟಿಸಲಾಗುತ್ತಿದೆ.

- ಕೊಂಕಣಿ ಅಧ್ಯಯನ ಪೀಠದ ಆಶ್ರಯದಲ್ಲಿ ಆಸಕ್ತರಿಗೆ ಕೊಂಕಣಿ ಸ್ಪೀಕಿಂಗ್ ಸರ್ಟಿಫಿಕೇಟ್ ಕೋರ್ಸ್ ಅನ್ನು ಮಂಗಳೂರು ವಿಶ್ವವಿದ್ಯಾನಿಲಯ ವ್ಯಾಪ್ತಿಯ ಎರಡು ಕಾಲೇಜುಗಳಲ್ಲಿ ಸಂಘಟಿಸಲಾಗಿದೆ.

- ಭಾರತದ ಸ್ವಾತಂತ್ರ್ಯ ಅಮೃತ ಮಹೋತ್ಸವವನ್ನು ಮಂಗಳೂರು ವಿಶ್ವವಿದ್ಯಾನಿಲಯ ವ್ಯಾಪ್ತಿಯ ಐದು ಕಾಲೇಜುಗಳಲ್ಲಿ ಸಂಘಟಿಸಲಾಗಿದೆ. ಅಲ್ಲಿ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಕೊಂಕಣಿಗರು ನೀಡಿದ ಕೊಡುಗೆಗಳ ಕುರಿತು ವಿದ್ಯಾರ್ಥಿಗಳಿಗೆ ಮಾಹಿತಿ ನೀಡಲಾಗಿದೆ.

<table>
<tr>
<td>ಈ)</td>
<td>ಕೊಂಕಣಿ ಸಮುದಾಯದವರಿಗೆ ಶಾಲೆಗಳಲ್ಲಿ ಕೊಂಕಣಿ ಕಲಿಸಲು ಸರ್ಕಾರ ಕೈಗೊಂಡ ಕ್ರಮವೇನು; ಪ್ರಸ್ತುತ ಎಷ್ಟು ವಿದ್ಯಾರ್ಥಿಗಳು ಯಾವ ತರಗತಿಗಳಲ್ಲಿ ಕೊಂಕಣಿ ಭಾಷೆ ಕಲಿಯುತ್ತಿದ್ದಾರೆ? (ವಿವರ ನೀಡುವುದು)</td>
<td>ಕೊಂಕಣಿ ಸಮುದಾಯದವರಿಗೆ ಶಾಲೆಗಳಲ್ಲಿ ಕೊಂಕಣಿ ಕಲಿಯಲು ಅನುಕೂಲವಾಗುವಂತೆ 06 ರಿಂದ 10ನೇ ತರಗತಿಯವರೆಗೆ ತೃತೀಯ ಭಾಷೆಯನ್ನು ಅಳವಡಿಸಿದ್ದು, ಬೇಡಿಕೆಯ ಪ್ರಕಾರ ಕೊಂಕಣಿಗೆ (ಕನ್ನಡ) ಕೊಂಕಣಿ, (ದೇವನಗರಿ) (TL) ಪಠ್ಯಪುಸ್ತಕಗಳನ್ನು ಮುದ್ರಿಸಿ ಸರಬರಾಜು ಮಾಡಲಾಗುತ್ತಿದೆ.<br><br>2025-26 ನೇ ಸಾಲಿಗೆ ಉಚಿತ, ಮಾರಾಟ ಹಾಗೂ ಆರ್.ಟಿ.ಇ ಅಡಿಯಲ್ಲಿ ಸಲ್ಲಿಕೆಯಾಗಿರುವ ಬೇಡಿಕೆಯಂತೆ ಸದರಿ ಪಠ್ಯಪುಸ್ತಕಗಳನ್ನು ಮುದ್ರಿಸಿ ಸರಬರಾಜು ಮಾಡಲಾಗಿರುವ ಹಾಗೂ ಪ್ರಸ್ತುತ 06 ರಿಂದ 10ನೇ ತರಗತಿಯವರೆಗೆ ಕೊಂಕಣಿ ಭಾಷೆ ಕಲಿಯುತ್ತಿರುವ ವಿದ್ಯಾರ್ಥಿಗಳ ವಿವರ ಕೆಳಕಂಡಂತಿರುತ್ತದೆ.<br><br>
<table>
<tr><th>ಕ್ರ. ಸಂ</th><th>ತರಗತಿ</th><th>ಕೊಂಕಣಿ ಕನ್ನಡ</th><th>ಕೊಂಕಣಿ ದೇವನಗರಿ</th></tr>
<tr><td>1</td><td>6</td><td>506</td><td>1148</td></tr>
<tr><td>2</td><td>7</td><td>80</td><td>184</td></tr>
<tr><td>3</td><td>8</td><td>46</td><td>62</td></tr>
<tr><td>4</td><td>9</td><td>0</td><td>62</td></tr>
<tr><td>5</td><td>10</td><td>0</td><td>78</td></tr>
<tr><td colspan="2">ಒಟ್ಟು</td><td>632</td><td>1534</td></tr>
</table>
</td>
</tr>
</table>

ಸಂಖ್ಯೆ: ಕಸಂವಾ 34 ಕೆಓಎಲ್ ಆಕ 2026

**(ಶಿವರಾಜ ಎಸ್. ತಂಗಡಗಿ)**
ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ
ಕನ್ನಡ ಮತ್ತು ಸಂಸ್ಕೃತಿ ಸಚಿವರು